ಪಿಡ್ಲ್ಯೂಃ 2

ದಿನಾಂಕ 15.04.2025 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು :</u> ಆರೋಪಿ ಪರ : ಶ್ರೀ ಹೆಚ್ ಆರ್ ಕೆ ವಕೀಲರಿಂದಃ

ನಾನು ಹೆಬ್ರಿ ಸರಕಾರಿ ಆಸ್ಪತ್ರೆಗೆ ಹೋಗಿರುತ್ತೇನೆ. ಸುಮಾರು 9.00 ಗಂಟೆಗೆ ಹೋಗಿದ್ದು 9.15 ರವರೆಗೆ ಹೆಬ್ರಿ ಸರಕಾರಿ ಆಸ್ಪತ್ರೆಯಲ್ಲಿ ಇದ್ದೆ. ಆ ಸಮಯದಲ್ಲಿ ನನ್ನ ಜೊತೆ ಹೆಬ್ರಿ ಸರಕಾರಿ ಆಸ್ಪತ್ರೆಯಲ್ಲಿ ಚಾಸಾ-1 ಇದ್ದರು. ಅಲ್ಲಿಂದ 9.15 ಗಂಟೆಗೆ ಠಾಣೆಗೆ ಹೋಗಿದ್ದು 12.15 ಗಂಟೆಯವರೆಗೆ ಅಲ್ಲಿ ಇದ್ದೆ. ಆ ಸಮಯದಲ್ಲಿ ನನ್ನ ಜೊತೆ ಚಾಸಾ-1, 6 ಇದ್ದರು. ನನ್ನ ಸಮಕ್ಷಮ ಪೊಲೀಸರು ಬೇರೆಯವರ ವಿಚಾರಣೆ ಮಾಡಿರುವುದಿಲ್ಲ. ಪೊಲೀಸ್ ಠಾಣೆಗೆ 2 ಬಾರಿ ಅಂದರೆ ದಿಃ 01.01.2024 ಮತ್ತು 03.01.2024 ರಂದು ಹೋಗಿರುತ್ತೇನೆ. ಪೊಲೀಸರಿಗೆ ಹೇಳಿಕೆ ಕೊಡುವಾಗ ಕನ್ಯಾನದಲ್ಲಿರುವ ಫ್ಯಾಕ್ಟರಿಗೆ ಹಿಂದಿರುಗಿ ಹೋಗುವಾಗ ಈ ಅಪಘಾತವಾಗಿದೆ ಎಂದು ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೇ ಪೊಲೀಸರಿಗೆ ಹೇಳಿಕೆ ನೀಡಿರುತ್ತೇನೆ. ಆ ದಿವಸ ನಾನು ನನ್ನ ಅಂಗಡಿಯಲ್ಲಿ ಇದೆ. ಕೋಮಲ್ ಫೀಡ್ಸ್ ಫ್ಯಾಕ್ಟರಿಯಿಂದ 50 ಮೀಟರ್ ದೂರದಲ್ಲಿ ಇದ್ದ ನನ್ನ ಅಂಗಡಿಯ ಹೊರಗೆ ನಿಂತಿದ್ದೆ. ನಾನು ಹೇಳಿಕೆ ನೀಡುವಾಗ ರಾಷ್ಟ್ರೀಯ ಹೆದ್ದಾರಿ ಕಾಮಾಗಾರಿ ನಡೆಯುತ್ತಿದ್ದ ಕಾರಣ ಒಂದು ಬದಿಯಲ್ಲಿ ರಸ್ತೆ ಸಂಚಾರವನ್ನು ಬಂದುಮಾಡಿರುತ್ತಾರೆ ಎಂದು ಹೇಳಿದ್ದೆ. ಪಶ್ಚಿಮ ದಿಕ್ಕಿನಲ್ಲಿ ರಸ್ತೆ ಬಂದು ಮಾಡಿದ ಕಾರಣ ಪೂರ್ವ ದಿಕ್ಕಿನಲ್ಲಿ ಇದ್ದ ರಸ್ತೆಯಲ್ಲಿ ಹೋಗಲು ಬರಲು ಅನುವು ಮಾಡಿಕೊಟ್ಟಿದ್ದರು. ಪೊಲೀಸರಿಗೆ ಹೇಳಿಕೆ ನೀಡುವಾಗ ರಸ್ತೆಯ ಇನ್ನೊಂದು ಬದಿಯಲ್ಲಿ ನಾನು ನಿಂತಿದ್ದೆ ಎಂದು ಹೇಳಿಕೆ ನೀಡಿರುವುದಿಲ್ಲ. ನಾನು ನೋಡುವಾಗ ರಸ್ತೆಯಲ್ಲಿ ಚಾಸಾ-1 ಮತ್ತು 6 ಹಾಗೂ ಮೃತ ಜಯಂತ್ ರಾವ್ ರವರು ಹೋಗುತ್ತಿದ್ದರು. ರಸ್ತೆಯ ಬದಿಯ ಅಂಚಿನಲ್ಲಿ ಜಯಂತ್ ರಾವ್ ಮತ್ತು ಚಾಸಾ-6 ರವರು ಮುಂದೆ ಮುಂದೆ ನಡೆದುಕೊಂಡು ಹೋಗುತ್ತಿದ್ದರು. ಮೃತ ಜಯಂತ್ ರವರು ಚಾಸಾ-1 ಮತ್ತು 6 ರವರ ಹಿಂದೆ

ನಡೆದುಕೊಂಡು ಬರುತ್ತಿದ್ದರು. ಇದೆ ಪ್ರಕಾರ ನಾನು ಪೊಲೀಸರಿಗೆ ಹೇಳಿಕೆ ನಿಡುವಾಗ ಹೇಳಿರುತ್ತೇನೆ ಎಂದರೆ ಸರಿ.

ರಸ್ತೆ ಕಾಮಾಗಾರಿ ನಡೆಯುತ್ತಿದ್ದ ಕಾರಣ ಕೋಮಲ್ ಫೀಡ್ ಹತ್ತಿರ ಒಂದು ಡೈವರ್ಸನ್ ಮಾಡಿದ್ದರು ಎಂದರೆ ಸರಿ. ಕೋಮಲ್ ಫೀಡ್ಸ್ ಫ್ಯಾಕ್ಟರಿಯಿಂದ 2 ಕಿ ಮಿ ದೂರದಲ್ಲಿ ಇನ್ನೊಂದು ಡೈವರ್ಸನ್ ಇತ್ತು. ನಿಪಿ-3 ರ ಪ್ರಕಾರ ರಾಜೇಶ್ ಪೂಜಾರಿಯವರ ಮನೆಯಿಂದ ಉತ್ತರ ದಿಕ್ಕಿನಲ್ಲಿ ನಮ್ಮ ಫ್ಯಾಕ್ಟರಿ ಇರುತ್ತದೆ. ನಾನು ನಿಂತುಕೊಂಡಿದ್ದೇನೆ ಎಂದು ಹೇಳುವ ಅಂಗಡಿಯನ್ನು ನಿಪಿ-3 ರಲ್ಲಿ ಕಾಣಿಸಿರುವುದಿಲ್ಲ. ಘಟನೆ ಸಮಯದಲ್ಲಿ ರಾಷ್ಟ್ರೀಯ ಹೆದ್ದಾರಿ ಕಾಮಾಗಾರಿ ಆಗುತ್ತಿದ್ದ ಕಾರಣ ದಾರಿಯಲ್ಲಿ ದೀಪ ಇರುವುದಿಲ್ಲ. ಅಪಘಾತ ಸ್ಥಳದಲ್ಲಿ ರಸ್ತೆಯ ಪಕ್ಕದಲ್ಲಿ 3 ಅಡಿ ಮಣ್ಣಿನ ರಸ್ತೆ ಬದಿಯಲ್ಲಿ 2 ಅಡಿ ಚರಂಡಿ ಇತ್ತು. ಅದು ಒಟ್ಟಾರೆ 5 ಅಡಿ ಇತ್ತು. ರಾಷ್ಟ್ರೀಯ ಹೆದ್ದಾರಿ ಕಾಮಾಗಾರಿ ಆಗುತ್ತಿದ್ದ ಕಾರಣ 3 ಅಡಿ ಮಣ್ಣಿನ ರಸ್ತೆ ಮತ್ತು 2 ಅಡಿ ಚರಂಡಿಯನ್ನು ಕಾಲು ದಾರಿಯಾಗಿ ಮಾಡಿಕೊಟ್ಟಿರುತ್ತಾರೆ. ನನ್ನ ಪ್ರಕಾರ ಮೃತ ಜಯಂತ್ ಬೋರೋ ಹಾಗೂ ಚಾಸಾ-1 ಮತ್ತು 6 ರವರು ಮಣ್ಣಿನ ರಸ್ತೆಯಲ್ಲಿ ನಡೆದುಕೊಂಡು ಹೋಗುತ್ತಿದ್ದರು. ಅಪಘಾತವಾಗುವ ಸಮಯದಲ್ಲಿ ಮೃತ ಜಯಂತ್ ಬೋರೊ ರಾಷ್ಟ್ರೀಯ ಹೆದ್ದಾರಿಯಲ್ಲಿ ಇದ್ದರು. ನಿಪಿ-3 ರಲ್ಲಿ ತೋರಿಸಿದ ಘಟನಾ ಸ್ಥಳದಲ್ಲಿ ಮೃತ ಜಯಂತ್ ಬೋರೊ ಇದ್ದರು. ಈ ಅಪಘಾತವು ಮೃತ ಜಯಂತ್ ಬೋರೋ ಅವರ ಹಿಂದಿನಿಂದ ಅಂದರೆ ಹೆಬ್ರಿ ಕಡೆಯಿಂದ ಕನ್ಯಾನ ಕಡೆಗೆ ಬರುವ ದಾರಿಯಲ್ಲಿ ಆಗಿರುತ್ತದೆ. ಚಾಸಾ-1 ಮತ್ತು 6 ರವರು ಮೃತ ಜಯಂತ್ ಬೋರೊ ರವರ ಹಿಂದುಗಡೆಯಿಂದ ಕಾರಣ ಈ ಅಪಘಾತವನ್ನು ನೋಡಿರುವುದಿಲ್ಲ ಎಂದರೆ ಸರಿ.

ಯಾವುದೇ ವ್ಯಕ್ತಿ ಮಣ್ಣಿನ ರಸ್ತೆಯಲ್ಲಿ ಹೋಗುವಾಗ ಈ ಪ್ರಕರಣಕ್ಕೆ ಸಂಬಂಧಿಸಿದ ಅಪಘಾತವಾಗುವುದಿಲ್ಲ ಎಂದರೆ ಸರಿ. ಮೃತ ಜಯಂತ್ ಬೋರೊ ರವರಿಗೆ ಮದ್ಯಪಾನ ಮಾಡುವಾಗ ಅಭ್ಯಾಸ ಇರುತ್ತದೆ ಎಂದರೆ ಸರಿ. 31 ನೇ ಡಿಸೆಂಬರ್ ಆದ ಕಾರಣ ಮೃತ ಜಯಂತ್ ಬೋರೊ ಮದ್ಯಪಾನ ಮಾಡಿ ರಾಷ್ಟ್ರೀಯ ಹೆದ್ದಾರಿಗೆ ಅವರೇ ಸ್ವತಃ ಬಂದಾಗ ಕಾರಣ ಅಪಘಾತವಾಗಿರುತ್ತದೆ ಎಂದರೆ ಸರಿಯಲ್ಲ. ಆರೋಪಿಯು ಯಾವುದೇ ಅತೀವೇಗ ಹಾಗೂ ಅಜಾಗರೂಕತೆಯಿಂದ ವಾಹನವನ್ನು ಚಲಾಯಿಸಿರುವುದಿಲ್ಲ ಎಂದರೆ ಸರಿಯಲ್ಲ.

ನಾನು ಅಪಘಾತ ಸ್ಥಳದಲ್ಲಿ ಇರಲಿಲ್ಲ, ನಾನು ಅಪಘಾತವನ್ನು ನೋಡದಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನಾ ರೀತ್ಯಾಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓದಿ ಹೇಳಿ ಕೇಳಿ ಸರಿ ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಕಾರ್ಕಳ

Learned APP filed memo praying to issue s/s to the CW 4 to 17. As the eye witness Pw to 3 have completly turned hostile to the case of prosecution. No purpose will be served by

issuance of summons to CW 4 to 17. Hence by rejecting the prayer of learned APP evidence of CW 4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed. Posted for compliance and Arguments.

Call on 28-02-2024.

Prl. Civil Judge & JMFC.
Karkala

Accused absent. E.P filed and allowed for a day. CW1 to 3 present and examined as PW1 to 3 and got marked Ex.P1 and 12. and 1(a) to 4(a,. 9(a)

Learned APP filed memo, praying to issue s/s to the CW4 to 17. As the eye witness and victim witness CW1 to 3 have completly turned hostile to the case of

prosecution and the parties are relatives and submitted the matter is settled b/w the .Hence no purpose will be served by issuance of summons to CW4 to 17. Who are hearsay witness, mahazar witness and official witness. Hence by rejecting the prayer of learned APP. Evidence of CW4 to 17 are dropped and closed prosecution side evidence and posted for 313 statement.

As there are no incriminating evidences against the accused recording of 313 statement is dispensed and posted for compliance Under 437A and Arguments.

Call on : 17.08.2021

Prl. Civil Judge & JMFC.
Karkala